ಶ್ರೀ ವೈ. ರಾಮಕೃಷ್ಣ.—ಯೋಚನೆ ಮಾಡಿದ್ದೇವೆ. ಉದಾಹರಣೆಗೆ, ಕಾನೂನು ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವವರಿಗೆ ತರಬೇತಿ ಕೊಟ್ಟು ಅವರನ್ನು ಮುನ್ಸಿಫ್ ಮ್ಯಾಜಿಸ್ಟ್ರೇಟ್ ಮಾಡುವುದಕ್ಕೆ ಸರ್ಕಾರ ಈಗಾಗಲೇ ಕೆಲವಾರು ಕಾರ್ಯಕ್ರಮಗಳನ್ನು ತೆಗೆದುಕೊಂಡಿದೆ. ಅದೇ ರೀತಿ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲೂ ಸಹ ವಿಶೇಷ ಗಮನ ಕೊಡುತ್ತಿದ್ದೇವೆ ಇವರಿಗೆ ತರಬೇತಿ ಸೌಕರ್ಯಗಳನ್ನು ಕಲ್ಪಿಸಿಕೊಟ್ಟು ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದಕ್ಕೆ ಏನೇನು ಬೇಕೋ ಅದೆಲ್ಲವನ್ನೂ ಒದಗಿಸಿಕೊಡುತ್ತೇವೆ.

ಶ್ರೀ ಎ. ರಾಮಚಂದ್ರ.—ಕಳೆದ ವರ್ಷ ಮ್ಯಾಜಿಸ್ಟ್ರೇಟ್ ಹುದ್ದೆಗೆ ಸಂದರ್ಶನ ನಡೆಯಿತು. ಆಗ ಸೂಕ್ತ ಹರಿಜನ ಅಭ್ಯರ್ಥಿಗಳು ಸಿಗಲಿಲ್ಲವೆಂದು ಹೇಳಿದರು. ಇದಕ್ಕೆ ಕಾರಣವೇನು ?

ಶ್ರೀ ವೈ. ರಾಮಕೃಷ್ಣ.—ಇದೇ ಅದಕ್ಕೂ ಕಾರಣ. ಆ ಹುದ್ದೆಯಲ್ಲಿ ತೇರ್ಗಡೆಯಾಗಬೇಕಾದರೆ ಕನಿಷ್ಠ ೪೦ ಅಂಕಗಳನ್ನು ಪಡೆಯಬೇಕೆಂದು ನಿಯಮವಿತ್ತು. ಅಷ್ಟು ಅಂಕವನ್ನು ಯಾರೂ ಪಡೆಯಲಿಲ್ಲ ವೆಂದು ಹರಿಜನ ಅಭ್ಯರ್ಥಿಗಳಾರಿಗೂ ಕೊಟ್ಟಿಲ್ಲ, ಈಗ ನಿಯಮವನ್ನು ಬದಲಾವಣೆ ಮಾಡಿದ್ದೇವೆ.

Financial help for encouraging the inter-caste Marriages

234 SRI T.B. JAYACHANDRA (Kallambella)—Will the Minister for Social Welfare and Backward Classes be pleased to state :—

(a) whether any encouragements of financial help given from the Government for encouraging inter-caste marriages in the State and if so what is the nature of the help ;

(b) in how many such marriages, the Government has given financial help ?

SRI P. VENKATARAMANA (Minister for Social Welfare & Backward Classes)—

(a) Yes. The Financial assistance of Rs. 2,000/- which was being given since 10-1-1972 has been enhanced o 5000/- with effect from 14-10-1980.

(b) 68 Marriages.

ಶ್ರೀ ಟಿ.ಬಿ. ಜಯಚಂದ್ರ.—ಒಟ್ಟು ೬೮ ಅಂತರ್ಜಾತಿ ವಿವಾಹಗಳಾಗಿವೆ ಎಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಇದು ಯಾವ ಅವಧಿಗೆ ಮತ್ತು ಎಲ್ಲ ಅಂತರ್ಜಾತಿ ವಿವಾಹಗಳಿಗೂ ಪ್ರೋತ್ಸಾಹ ಧನ ನೀಡಲಾಗಿದೆಯೆ ಎಂಬುದನ್ನು ಮಾನ್ಯ ಸಚಿವರು ತಿಳಿಸುವರೆ ?

ಶ್ರೀ ವೈ. ರಾಮಕೃಷ್ಣ (ಸಮಾಜ ಕಲ್ಯಾಣ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವಾಗಿ ಈ ಅಂಕಿ ಅಂಶಗಳನ್ನು ನೀಡಬಯಸುತ್ತೇನೆ.

ವರ್ಷ	ಮದುವೆ ಸಂಖ್ಯೆ	ಪ್ರೋತ್ಸಾಹ ಧನ
		(ಸಾವಿರ ರೂಪಾಯಿಗಳಲ್ಲಿ)
೧೯೭೫–೭೬	೩	೬
೧೯೭೬–೭೭	೨	೪
೧೯೭೭–೭೮	೧೧	೨೨
೧೯೭೮–೭೯	೧೨	೨೪
೧೯೭೯–೮೦	೨೨	೪೪
೧೯೮೦–೮೧	೧೮	೬೯
ಒಟ್ಟು	೬೮	೧೬೯

ಶ್ರೀ ಟಿ.ಬಿ. ಜಯಚಂದ್ರ —ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಸಲ್ಲಿಸಿ ಇತ್ಯರ್ಥವಾಗದೆ ಇರುವ ಪ್ರಕರಣಗಳು ಎಷ್ಟು ಇವೆ ಎಂದು ಮಾನ್ಯ ಸಚಿವರು ತಿಳಿಸುವರೆ ?

ಶ್ರೀ ವೈ. ರಾಮಕೃಷ್ಣ.—ಇದಕ್ಕೆ ನೋಟಿಸ್ ಬೇಕು.

ಶ್ರೀ ಟಿ.ಬಿ. ಜಯಚಂದ್ರ — ಮಾನ್ಯ ಅಧ್ಯಕ್ಷರೇ, ನಾನು ಪ್ರಶ್ನೆ ಕಳುಹಿಸಿದ್ದ ಉದ್ದೇಶವೇ ಇದು ಏಕೆಂದರೆ, ಕೆಲವು ಪ್ರಕರಣಗಳಲ್ಲಿ ಮದುವೆಯಾಗಿ ಎರಡೆರಡು ಮಕ್ಕಳಾಗಿದ್ದರೂ ಇನ್ನು ಅವರಿಗೆ ಪ್ರೋತ್ಸಾಹ ಕೊಟ್ಟಿಲ್ಲ. ಇವುಗಳನ್ನು ಇತ್ಯರ್ಥ ಮಾಡದೆ ಏತಕ್ಕೆ ಹಾಗೆ ಇಟ್ಟುಕೊಂಡಿದ್ದೀರಿ ?

ಶ್ರೀ ವೈ. ರಾಮಕೃಷ್ಣ.—ದಿನಾಂಕ ೧೦–೧–೧೯೭೭ ರಲ್ಲಿ ಹೊರಡಿಸಿದ ಸರ್ಕಾರದ ಆದೇಶದ ಪ್ರಕಾರ ಮದುವೆಯಾದ ಒಂದು ವರ್ಷ ಕಳೆದ ನಂತರ ಪ್ರೋತ್ಸಾಹ ಧನಕ್ಕೆ ಅರ್ಜಿ ಹಾಕಿಕೊಳ್ಳಬೇಕಾಗಿತ್ತು. ಆದರೆ, ದಿನಾಂಕ ೧೪ ೧೦–೧೯೮೦ ರಲ್ಲಿ ಹೊರಡಿಸಿದ ಸರ್ಕಾರದ ಆದೇಶದ ಪ್ರಕಾರ ಮದುವೆಯಾದ ಕೂಡಲೇ ಪ್ರೋತ್ಸಾಹ ಧನ ಕೊಡಬೇಕೆಂದು ಮಾಡಲಾಗಿದೆ. ಈ ಪ್ರಕಾರ ಬಂದ ಅರ್ಜಿಗಳನ್ನು ಶೀಘ್ರದಲ್ಲೇ ಇತ್ಯರ್ಥ ಮಾಡುತ್ತೇವೆ.

ಶ್ರೀ ವಿ.ವಿ. ಪತ್ತಾರ್.—ಅಂತರ್ಜಾತೀಯ ವಿವಾಹಗಳಿಗೆ ಸರ್ಕಾರ ಹೆಚ್ಚಿನ ಪ್ರೋತ್ಸಾಹ ಕೊಡುವುದು ಅಗತ್ಯವಿದೆ ಎಂದು ನಾನು ಭಾವಿಸುತ್ತೇನೆ. ಹರಿಜನ ಕನ್ಯೆಯೊಂದನ್ನು ಸವರ್ಣೀಯನು ಮದುವೆಯಾದಾಗ ಅವನಿಗೆ ಸರ್ವಿಸ್ ಪ್ರಿಫೆರೆನ್ಸ್ ಕೊಡುವುದನ್ನು ತಾವು ಪರಿಶೀಲಿಸುವಿರಾ ?

ಶ್ರೀ ವೈ. ರಾಮಕೃಷ್ಣ.—ಇದು ಪರಿಶೀಲನೆಗೆ ಅರ್ಹವಾದ ವಿಚಾರ. ಪರಿಶೀಲಿಸುತ್ತೇನೆ.

ಶ್ರೀ ಶೀರ್ನಾಳಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ತಮಗೆ ವರನಲ್ಲಿ ಆಸಕ್ತಿ ಇದೆಯೋ ? ಅಥವಾ ವಧುವಿನಲ್ಲಿ ಆಸಕ್ತಿ ಇದೆಯೋ ?

ಶ್ರೀ ಶೀರ್ನಾಳಿ ಚಂದ್ರಶೇಖರ್.–ಸ್ವಾಭಾವಿಕವಾಗಿ ನಮಗೆ ವಧುವಿನಲ್ಲಿ ತಾನೇ ಆಸಕ್ತಿ ಇರುವುದು! ಮಾನ್ಯ ಅಧ್ಯಕ್ಷರೇ, ನಾನು ೧೯೭೨ರ ಸುಮಾರಿನಲ್ಲಿ ತಂದ ಖಾಸಗಿ ನಿರ್ಣಯವನ್ನು ಒಪ್ಪಿ ಮಾಡಿರತಕ್ಕ ಆಜ್ಞೆ ಇದು. ಇದು ನನಗೆ ಹೆಮ್ಮೆ ತರುವಂಥ ವಿಚಾರ. ಇದು ನನ್ನ ಸಾಧನೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ. ಆದರೆ, ಇದರಲ್ಲಿರುವ ದುರಂತವನ್ನು ತಾವು ಗಮನಿಸಿದ್ದೀರಾ ? ಸರ್ಕಾರ ಕೊಡುವ ದುಡ್ಡಿಗಾಗಿ ಆಸೆಪಟ್ಟು, ದುಡ್ಡು ತೆಗೆದುಕೊಂಡ ಮರುದಿವಸವೇ ಹುಡುಗಿಯನ್ನು ಮನೆಯಿಂದ ಕಳುಹಿಸುವ ಘಟನೆಗಳು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಅಧ್ಯಕ್ಷರು.—ಆದಕ್ಕಾಗಿಯೇ, ಮದುವೆಯಾದ ಒಂದು ಅಥವಾ ಎರಡು ವರ್ಷದ ಮೇಲೆ ಹಣ ಕೊಡಬೇಕೆಂದು ಮೊದಲು ಮಾಡಿದ್ದು.

ಶ್ರೀ ಶೀರ್ನಾಳಿ ಚಂದ್ರಶೇಖರ್.—ನನ್ನ ಮೂಲ ನಿರ್ಣಯದಲ್ಲಿ ಅಂತರ್ಜಾತಿ ವಿವಾಹವಾದವರಿಗೆ ಉದ್ಯೋಗದಲ್ಲಿ ಮೀಸಲಿಡಬೇಕೆಂದು ಅರಿಕೆ ಮಾಡಿದ್ದು. ಇದನ್ನು ತಾವು ಯೋಚನೆ ಮಾಡಿದಿ ೀರಾ ? ಜೊತೆಗೆ ಜಿಲ್ಲಾವಾರು ಎಷ್ಟೆಷ್ಟು ಮದುವೆಗಳಾಗಿವೆ ಮತ್ತು ಐದು ಸಾವಿರ ರೂಪಾಯಿಗಳ ಪ್ರೋತ್ಸಾಹ ಧನವನ್ನು ಯಾರು ಯಾರಿಗೆ ಕೊಡಲಾಗಿದೆ ಎಂದು ತಿಳಿಸುವಿರಾ ?

ಶ್ರೀ ವೈ. ರಾಮಕೃಷ್ಣ.—ಈ ಪ್ರಶ್ನೆಗೆ ನಾನು ಈಗಾಗಲೇ ನಾನು ಉತ್ತರ ಕೊಟ್ಟಿದ್ದೆ ನೆ. ಇನ್ನು, ಹುದ್ದೆಗಳನ್ನು ಮೀಸಲಿಡುವ ವಿಚಾರವನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಅಧ್ಯಕ್ಷರು.—ಹರಿಜನರ ಹೆಣ್ಣು ಮದುವೆ ಆದವರಿಗೆ ಮಾತ್ರ ಕೊಡುತ್ತೀರೆ ೀ ? ವೈಸಾ ವರ್ಸಾ ಇದೆಯೋ ?

ಶ್ರೀ ವೈ. ರಾಮಕೃಷ್ಣ.—ವೈಸಾ ವರ್ಸಾ ಇದೆ. ಬೆಂಗಳೂರಿನಲ್ಲಿ ೭, ಕೋಲಾರದಲ್ಲಿ ಒಂದು, ತುಮಕೂರಿನಲ್ಲಿ ಎರಡು, ಶಿವಮೊಗ್ಗದಲ್ಲಿ ಎರಡು, ಮೈಸೂರಿನಲ್ಲಿ ಒಂದು. ದಕ್ಷಿಣ ಕನ್ನಡದಲ್ಲಿ ಒಂದು, ಚಿಕ್ಕಮಗಳೂರಿನಲ್ಲಿ ಎರಡು, ಗುಲ್ಬರ್ಗದಲ್ಲಿ ಒಂದು, ಧಾರವಾಡದಲ್ಲಿ ಒಂದು ಒಟ್ಟು ೧೮ ಮದುವೆಗಳಾಗಿವೆ. ಈ ಮದುವೆಗಳಿಗಾಗಿ ೮೦–೮೧ ನೇ ಸಾಲಿನಲ್ಲಿ ಕೊಟ್ಟಿರತಕ್ಕಂಥ ಹಣ ೬೯,೦೦೦ ರೂಪಾಯಿಂ ಗಳು.

ಶ್ರೀ ಟಿ.ಬಿ. ಜಯಚಂದ್ರ.—ಸ್ವಾಮಿ, ನನ್ನ ಜೊತೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ಲಿಂಗಾಯಿತ ಮಿತ್ರರಿಗೆ ನಾನೇ ಮುಂದೆ ನಿಂತುಕೊಂಡು ಮದುವೆ ಮಾಡಿಸಿದ್ದೆ ನೆ. ಇನ್ನು ಕೂಡ ಅವರಿಗೆ ಸಹಾಯ ಸಿಕ್ಕಿಲ್ಲ. ಅವರಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡಿಸುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಅಧ್ಯಕ್ಷರೇ, ೮,೦೦೦ ರೂಪಾಯಿ ಮೇಲ್ಪಟ್ಟು ವರಮಾನ ಇದ್ದರೆ ಕೊಡುವುದಕ್ಕೆ ಬರುವುದಿಲ್ಲ, ಇದನ್ನೆಲ್ಲಾ ನೋಡಬೇಕಾಗುತ್ತದೆ.

Veterinary Hospitals in Kollegal Taluk

396 SRI G. RAJUGOWDA (Hanur)—Will the Minister for Law, Parliamentary Affairs & Veterinary & Animal Husbandry be pleased to state :—

(a) the number of live-stock in Kollegal Taluk ;

(b) the number of Veterinary Hospitals ought to have been there, in proportionate with the number of Live-stock as per the norms of the Government ;

(c) whether it has come to the notice of the Government that due to non-existence of Veterinary Hospitals, many Live-stocks are being dying every year due to bad diseases ;

(d) the names of the places of this Taluk where and when Government has decided to open Veterinary Hospitals ?

SRI Y. RAMAKRISHNA Minister for Law, Parliamentary Affairs & Veterinary & Animal Husbandry) —

(a) 1,34,977.

(b) 13.

(c) Precautionary measures are being taken to prevent whenever the epidemic disease spreads ;

(d) The matter of opening Veterinary Hospitals at Ajjapura & Marath Hally is under consideration.